## ನೆನಪು

ಹೆಂಡ್ತಿ: (ತವರು ಮನೆಯಿಂದ) ರೀ, ಹೇಗಿದೀರಿ?
ಗಂಡ: ಚೆನ್ನಾಗಿದ್ದೀನಿ ಡಾರ್ಲಿಂಗ್.
ಹೆಂಡ್ತಿ: ಮತ್ತೆ ನನ್ನ ನೆನಪಾದ್ರೆ, ಏನ್ಮಾಡ್ತೀರಿ.
ಗಂಡ: ಜಾಮೂನು ಮಾಡಿ ತಿಂತೀನಿ. ನಿಂಗೆ ನನ್ ನೆನಪಾದ್ರೆ ಏನ್ ಮಾಡ್ತೀಯೇ?
ಹೆಂಡ್ತಿ: ನಾನು ಒಂದು ಪೆಗ್ ಬೀರ್ ಕುಡಿತೀನಿ ರೀ.

## ಚಿಂತೆ

ಆತ: ಈಗಿನ ಕಾಲದಲ್ಲಿ ತಂದೆ ತಾಯಿ ಒಂದೇ ಚಿಂತೆ ಮಾಡೋದು ಅಲ್ವಾ.
ಈತ: ಹೌದು, ಮಗ ಏನ್ ಡೌನ್‌ಲೋಡ್ ಮಾಡ್ದಾ ಅಂತ, ಮಗಳು ಏನ್ ಅಪ್‌ಲೋಡ್ ಮಾಡಿದ್ಲು ಅಂತ.

## ಗೊಂದಲ!

ಆತ: ಭಾರತದಲ್ಲಿ ಮನೆಗೆಲಸದವರ ಬಗ್ಗೆ ತುಂಬ ಗೊಂದಲವಿದೆ.
ಈತ: ಅದ್ಹೇಗೆ ಹೇಳ್ತೀಯಾ?
ಆತ: ನೋಡು 15 ವರ್ಷದೊಳಗಿನವರನ್ನು ನೇಮಕ ಮಾಡಿಕೊಳ್ಳೋಕೆ ಸರ್ಕಾರ ಒಪ್ಪಲ್ಲ; 15 ವರ್ಷ ಮೇಲಿನವರನ್ನು ನೇಮಕ ಮಾಡಿಕೊಳ್ಳೋಕೆ ಹೆಂಡತಿ ಒಪ್ಪಲ್ಲ; 40 ವರ್ಷ ಮೇಲಿನವರನ್ನು ನೇಮಕ ಮಾಡಿಕೊಳ್ಳಕ್ಕೆ ಗಂಡ ಒಪ್ಪಲ್ಲ.
ಈತ: ಸರಿಯಾಗಿ ಹೇಳಿದಿ.

## ಎಲ್ಲಿದೀರಿ?

ಹೆಂಡ್ತಿ: ( ಫೋನಿನಲ್ಲಿ) ರೀ, ಎಲ್ಲಿದ್ದೀರಿ?
ಗಂಡ: ಆಫೀಸಿನಲ್ಲಿದೀನಿ ರೋಜಾ. ಯಾಕೆ ಏನಾಯ್ತು?
ಹೆಂಡ್ತಿ: ಈಗ ನಮ್ಮ ಮನೆಗೆಲಸದವಳ ಗಂಡ ಬಂದಿದ್ದ.
ಗಂಡ: ಏನಂತೆ?
ಹೆಂಡ್ತಿ: ನಮ್ಮ ಮನೆಗೆಲಸದವಳು ನಿನ್ನೆ ಯಾರ ಜೊತೆಲೋ ಓಡಿಹೋದ್ಲಂತೆ, ಅಲ್ತಾ ಹೇಳ್ದ. ಅದ್ಕೆ ನೀವು ಎಲ್ಲದೀರಿ ಅಂತ ಫೋನ್ ಮಾಡ್ದೆ.

## ತಡ್ಕೋತಾನೆ?

ಇಬ್ಬರು ಕುಡುಕರು ಬಿಸಿಲಲ್ಲಿ ತೂರಾಡುತ್ತ ಸಾಗಿದ್ದರು.
ಒಬ್ಬ: ಲೇ, ಎಷ್ಟೊಂದು ಸೆಖೆ ಇದೆ ಇಂಥಾದ್ರಲ್ಲಿ ಸೂರ್ಯ ಹೆಂಗೆ ತಡ್ಕೋತಾನೆ?
ಇನ್ನೊಬ್ಬ: ನಂಗೂ ಅದೇ ತಿಳೀತಾ ಇಲ್ವೋ. ನಾ ಈ ಊರವ್ನಲ್ಲ.

## ಸಂತೋಷದ ವಿಷಯ

ಗಂಡ: ಲೇ, ನಿನಗೆ ಇವತ್ತು ಒಂದು ಸಂತೋಷ ಮತ್ತು ದುಃಖದ ವಿಷಯ ಇದೆ ಕಣೇ.
ಹೆಂಡ್ತಿ: ಅದೆಂಥಾದ್ದು. ಮೊದ್ಲು ಸಂತೋಷದ ವಿಷಯ ಹೇಳಿ.
ಗಂಡ: ನಿಮ್ಮ ಅಪ್ಪ ಅವ್ವ ಇಲ್ಲಿಗೆ ಬರ್ತಿದಾರೆ.
ಹೆಂಡ್ತಿ: ಮತ್ತೆ ದುಃಖದ ವಿಷಯ?
ಗಂಡ: ಕಿರಾಣಿ ಅಂಗಡಿಯವ ಇವತ್ತಿನಿಂದ ದಿನಸಿ ಕೊಡಲ್ಲ ಅಂದ!

(ಸಂಗ್ರಹ) ಪ್ರಕಾಶ ಎಸ್. ಮನ್ನಂಗಿ,
ಹಾವೇರಿ




### ಚಳಿಗಾಲ ಮುಗೀಲಿ

ಹೆಂಡ್ತಿ: ನನಗೆ ಡೈವೋರ್ಸ್ ಬೇಕು.
ಗಂಡ: ಒಂದಿಷ್ಟು ತಡಿ ಚಳಿಗಾಲ ಮುಗೀಲಿ.

---

ಎಲ್ಲ ಗಂಡಸರೂ ಉದಾರಿಗಳು. ಹೆಂಗಸರು ತುಂಬ ಸ್ವಾರ್ಥಿಗಳು. ಉದಾಹರಣೆಗೆ ಬಹಳ ಹೆಂಗಸರಿಗೆ ಅಪರಿಚಿತ ಗಂಡಸರಿಗೆ ಸಹಾಯ ಮಾಡೋದು ಇಷ್ಟವಾಗಲ್ಲ. ಎಲ್ಲ ಗಂಡಸರೂ ಯಾವುದೇ ಸಮಯದಲ್ಲಿ ಅಪರಿಚಿತ ಹೆಂಗಸರಿಗೆ ಸಹಾಯ ಮಾಡಲು ತಯಾರಾಗಿರ್ತಾರೆ.

★★★

ಸುನಾಮಿ ಬಂದಾಗ ಒಬ್ಬ ವ್ಯಕ್ತಿ ಅದರಲ್ಲಿ ತನ್ನ ಹೆಂಡತಿಯನ್ನು ಕಳೆದುಕೊಂಡು ಬಿಟ್ಟ. ಒಂದು ರಾತ್ರಿ ಭರ್ತಿ ಕುಡಿದು ಬಂದು ಸಮುದ್ರ ತೀರದಲ್ಲಿ ನಿಂತಿದ್ದಾಗ ಅಲೆಗಳು ಅವನ ಪಾದಗಳನ್ನು ಸ್ಪರ್ಶಿಸುತ್ತಿದ್ದವು. ಸ್ವಲ್ಪ ಹೊತ್ತಿಗೆ ಸಮುದ್ರದ ಕಡೆ ತಿರುಗಿ ಜೋರಾಗಿ ಕೂಗಿ ಹೇಳಿದ. 'ಹೇ ಅಲೆಗಳೇ ಬಂದು ಎಷ್ಟು ಸಲ ಪಾದ ಮುಟ್ಟಿದರೂ ಅವಳನ್ನು ಮಾತ್ರ ವಾಪಸ್ ಕರೆದುಕೊಳ್ಳಲ್ಲ. ನಿಮ್ಮದೇ ತಪ್ಪು, ಅವಳನ್ನು ಸಂಭಾಳಿಸಿಕೊಳ್ಳಿ'.

★★★

ದಂಪತಿ ಬಾವಿ ಪೂಜೆಗೆ ಅಂತ ಹೋದರು. ಮೊದಲಿಗೆ ಪತಿ ತನ್ನ ಮನಸ್ಸಿನಲ್ಲಿದ್ದ ಬೇಡಿಕೆಯನ್ನು ಹೇಳಿ, ಸ್ವಲ್ಪ ಬಗ್ಗಿ ಬಾವಿಯೊಳಗೆ ಹಣವನ್ನು ಹಾಕಿದ. ಆ ನಂತರ ಹೆಂಡತಿ ಸ್ವಲ್ಪ ಹೆಚ್ಚೇ ಬಗ್ಗಿ ಹಣ ಹಾಕುವುದರೊಳಗೆ ಬಾವಿಯೊಳಗೆ ಬಿದ್ದೇ ಹೋದಳು. ಆಗ ಗಂಡ ಜೋರಾಗಿ ಕಿರುಚಿದ. 'ಪ್ರಾರ್ಥನೆ ಮಾಡಿದ್ದು ಇಷ್ಟು ಬೇಗ ಫಲಿಸಿಬಿಡುತ್ತಾ?'.

★★★

ಹೆಂಡತಿ ಗಂಡನಿಗೆ ಫೋನ್ ಮಾಡಿ 'ಎಲ್ಲಿದ್ದೀರಾ' ಎಂದು ಕೇಳಿದಳು. ಅದಕ್ಕುತ್ತರಿಸಿದ ಗಂಡ, 'ನಾನಿನ್ನೂ ಆಫೀಸಿನಲ್ಲಿದ್ದೀನಿ. ಬಿಡುವಿಲ್ಲದಷ್ಟು ಕೆಲಸ. ನೀನೇನು ಮಾಡ್ತಿದೀಯಾ?. ಪ್ರತಿಕ್ರಿಯಿಸಿದ ಹೆಂಡತಿ, 'ನಾನು ಕೆಎಫ್‌ಸಿಯಲ್ಲಿ ಇದ್ದೀನಿ. ನಿಮ್ಮ ಹಿಂದಿನ ಟೇಬಲ್‌ನಲ್ಲೇ ನಾವು ಕೂತಿದ್ದೀವಿ. ನಿಮ್ಮ ಮಕ್ಕಳು ಕೇಳ್ತಿದ್ದಾರೆ: ಅಪ್ಪನ ಜತೆಯಲ್ಲಿದ್ದಾರಲ್ಲ ಆ ಆಂಟಿ ಯಾರು ಅಂತ. ಬಂದು ಹೇಳಿ!'

(ಸಂಗ್ರಹ) ವೀರಭದ್ರ, ಎಂ. ಬೆಂಗಳೂರು